ಅ) 'ಪರಿಹಾರ ಧನ' ವನ್ನು ಸರ್ಕಾರ ರೈತರೊಂದಿಗೆ ರಾಜಿ ಮಾಡಿಕೊಂಡು compromise award pass ಮಾಡಿ, ಸಂದಾಯ ಮಾಡಬೇಕೆಂದು ವಿನಂತಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು ನಿಜವೇ.

ಇ) ಹಾಗಾದರೆ ವಿಲೇವಾರಿ ಆಗದೇ ನೆನೆಗುದಿಗೆ ಬಿದ್ದಿರಲು ಕಾರಣವೇನು.

ಈ) ಈ ಪ್ರಕರಣದಲ್ಲಿ ರೈತಾಪಿ ಜನರಿಗೆ compromise ಮೂಲಕ ಪರಿಹಾರಧನ ಕೊಡಲು ಸರ್ಕಾರ ಸಿದ್ಧವಿದೆಯೇ, ಹಾಗಿದ್ದಲ್ಲಿ, ಹಣ ಸಂದಾಯ ಮಾಡುವುದು ಯಾವಾಗ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಔರಾದ್ ತಾಲ್ಲೂಕಿನ ಆಲೂರ-ಬೇಲೂರ ಸಣ್ಣ ನೀರಾವರಿ ಕೆರೆಯಲ್ಲಿ ಮುಖ್ಯ ಒಡ್ಡಿನ ಕಾರ್ಯ ಪೂರ್ಣಗೊಂಡಿದೆ. ಆದರೆ ನೀರಾವರಿ ಕಾಲುವೆ ಬಾಕಿ ಇದೆ. ಒಟ್ಟು 231 ಎಕರೆ 31 ಗುಂ. ಜಮೀನು ಸ್ವಾಧೀನಪಡಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಇಲ್ಲಿಯವರೆಗೆ ಯಾವುದೇ ಪರಿಹಾರ ಧನ ಸಂದಾಯ ಮಾಡಿಲ್ಲ.

ಆ) ರಾಜಿ ಮಾಡಿಕೊಂಡ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.

ಇ) ಭೂಸ್ವಾಧೀನ ನಡುವಳಿ ಮುಂದುವರೆಸಲು ರೂ. 52.00 ಲಕ್ಷ ಮುಂಗಡ ಠೇವಣಿ ಮಾಡಲು ಕಂದಾಯ ಇಲಾಖೆಯು ತಿಳಿಸಿದ್ದು, ಇದಕ್ಕೆ ಹಣವನ್ನು ಒದಗಿಸಲು ಕ್ರಮವನ್ನು ಕೈಗೊಳ್ಳಲಾಗುವುದು.

ಈ) ರಾಜಿ ಮೂಲಕ ಭೂ ಪರಿಹಾರ ನೀಡುವುದನ್ನು ಸರ್ಕಾರದ ಹಿತದೃಷ್ಟಿಯಿಂದ ಲಾಭದಾಯಕವಾಗಿದ್ದರೆ ಅನುದಾನದ ಲಭ್ಯತೆಯ ಮೇರೆಗೆ ಕಾನೂನಿನ ಪರಿಮಿತಿಯೊಳಗಿದ್ದರೆ ಐತೀರ್ಪು ಪತ್ರ ಜಾರಿಯಾದ ಕೂಡಲೇ ಹಣ ಭರವಸೆ ಪತ್ರ ಪಡೆದು ಹಣ ಸಂದಾಯ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಔರಾದ್ ತಾಲ್ಲೂಕಿನ ಗಣೇಶಪೂರ (ಯು) ಕೆರೆ ನಿರ್ಮಾಣದ ಭೂಸ್ವಾಧೀನಕ್ಕೆ ಭೂಪರಿಹಾರ

1400 (1766) - ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಗಣೇಶಪೂರ (ಯು) ಕೆರೆ ನಿರ್ಮಾಣದ ಸ್ವಾಧೀನಪಡಿಸಿಕೊಂಡ ಜಮೀನು ಎಷ್ಟು ಭೂಮಿ ಸ್ವಾಧೀನಪಡಿಸಿಕೊಂಡ ದಿನಾಂಕ ಯಾವುದು ಕೆರೆ ನಿರ್ಮಾಣ ಕಾರ್ಯ ಪೂರ್ಣಗೊಂಡ ವರ್ಷ ಯಾವುದು;

ಆ) ಒಕ್ಕಲಿಗರಾದ ಭೂ ಒಡೆಯರಿಗೆ ಪರಿಹಾರ: ಧನ ಸಂದಾಯವಾಗಿದೆಯೇ? ಸಂದಾಯವಾಗದೇ ಇರುವ ಇ.ಪಿ. ಪ್ರಕರಣಗಳು ಕೋರ್ಟಿನಲ್ಲಿ ಎಷ್ಟು ವರ್ಷಗಳಿಂದ ಬಾಕಿ ಇದೆ. ಇವರಿಗೆ ಪರಿಹಾರ ಧನ ಸಂದಾಯ ಮಾಡದೇ ಇರುವ ಕಾರಣಗಳೇನು:

ಇ) ಈ ವಿಷಯದಲ್ಲಿ ಈವರೆವಿಗೂ 35: ಎಕರೆ ಜಮೀನು ಭೂಸ್ವಾಧೀನ ಪ್ರಕರಣ ವಿಲೇವಾರಿ ಆಗದೇ ಜಿಲ್ಲಾಧಿಕಾರಿ, ಬೀದರ್ ರವರಲ್ಲಿ ನೆನಗುದಿಗೆ ಬಿದ್ದಿರುವ ಸಂಗತಿ ಸರ್ಕಾರಕ್ಕೆ ತಿಳಿಸಿದೆಯೇ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು. ಹಾಗೂ ಕೈಗೊಳ್ಳುವ ಕ್ರಮವೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು):

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಗಣೇಶಪುರ (ಯು) ಕೆರೆ ನಿರ್ಮಾಣ ಕಾಮಗಾರಿಗೆ ಒಟ್ಟು ಸ್ವಾದೀನಪಡಿಸಿಕೊಂಡ ಭೂಮಿಯ ವಿಸ್ತಾರ 94 ಎಕರೆ 37 ಗುಂಟೆ ಸ್ವಾಧೀನಪಡಿಸಿಕೊಂಡ ದಿನಾಂಕ: 21-7-1993. ಕೆರೆಯ ನಿರ್ಮಾಣ ಕಾರ್ಯ ಆಗಸ್ಟ್ 97 ರಲ್ಲಿ ಪೂರ್ಣಗೊಂಡಿದೆ.

ಆ) ಭೂ ಪರಿಹಾರ ಸಂದಾಯವಾಗಿರುವ ವಿವರ ಕೆಳಗಿನಂತಿದೆ.

1. ದಿ: 12-6-96 ರೂ. 5.43 ಲಕ್ಷ ಮೂಲ ಐತೀರ್ಪಿನಂತೆ.
2. ದಿ: 31-3-01 ರೂ. 5.00 ಲಕ್ಷ ಇ.ಪಿ. ಪ್ರಕರಣಗಳಿಗೆ.
3. ದಿ: 31-7-01 ರೂ. 7.50 ಲಕ್ಷ ಇ.ಪಿ. ಪ್ರಕರಣಗಳಿಗೆ.

ಒಟ್ಟು ರೂ. 17.93 ಲಕ್ಷ

ನ್ಯಾಯಾಲಯದಲ್ಲಿ ಒಟ್ಟು 14 ಇ.ಪಿ. ಪ್ರಕರಣಗಳು ಬಾಕಿ ಇದೆ. 2000 ರಿಂದ ನಡೆದಿದೆ.

14 ಇ.ಪಿ. ಪ್ರಕರಣಗಳಲ್ಲಿ ಒಟ್ಟು ರೂ. 22.89 ಲಕ್ಷ ಸಂದಾಯ ಮಾಡಬೇಕಾಗಿದೆ. ಅದರಲ್ಲಿ ಮೇಲೆ ಕ್ರ.ಸಂ. 2:3 ರಲ್ಲಿ ತೋರಿಸಿದಂತೆ ರೂ: 12.50 ಲಕ್ಷ ಸಂದಾಯ ಮಾಡಲಾಗಿದೆ. ಉಳಿದ ರೂ: 10.39 ಲಕ್ಷ ಬೇಡಿಕೆ ಪತ್ರ ಸಲ್ಲಿಸಲಾಗಿದೆ. ಹಣ ಭರವಸೆ ಪತ್ರ ಪಡೆದು ಬಾಕಿ ಮೊತ್ತ ಪಾವತಿಸಲಾಗುವುದು.

ಇ) ಡಿಸೆಂಬರ್ 1992 ರಲ್ಲಿ 87 ಎಕರೆ 287 ಗುಂಟೆ ಜಮೀನನ್ನು ಸ್ವಾಧೀನಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ ಭೂಸ್ವಾಧೀನಾಧಿಕಾರಿಗಳಿಂದ ಹೊರಡಿಸಲಾದ ಐತೀರ್ಪಿನಲ್ಲಿ 61 ಎಕರೆ 10 ಗುಂಟೆ ವಿಸ್ತೀರ್ಣ ನಮೂದಿಸಲಾಗಿದೆ. ಆದ್ದರಿಂದ ಬಿಟ್ಟು ಹೋದ ಸರ್ವೆ ನಂಬರುಗಳಲ್ಲಿ ಬರುವ ಜಮೀನುಗಳಿಗೆ ಹಾಗೂ ಮೂಲ ಪ್ರಸ್ತಾವನೆಯಲ್ಲಿ ತಪ್ಪಿಹೋದ ಜಮೀನುಗಳಿಗೆ ಕೂಡಿ ಹೆಚ್ಚುವರಿ ಭೂಸ್ವಾಧೀನ ಪ್ರಸ್ತಾವನೆ ದಿ: 18-4-98 ರಂದು ಸಲ್ಲಿಸಲಾಗಿದೆ. ಸದರಿ ಹೊಸ ಪ್ರಸ್ತಾವನೆಯನ್ನು ಭೂಸ್ವಾಧೀನ ಕಾಯ್ದೆಯಂತೆ ಜರುಗಿಸಲಾಗಿದೆ. ಜೆಎಂಸಿ: ಯಂತೆ ಮತ್ತು 6(1) ಅಧಿಸೂಚನೆಯಂತೆ ಒಟ್ಟು 29 ಎಕರೆ 13 ಗುಂಟೆ ವಿಸ್ತೀರ್ಣದ ಭೂಮಿಗೆ ಪರಿಹಾರ ನೀಡಲು ಭೂಸ್ವಾಧೀನಾಧಿಕಾರಿಗಳಿಂದ ಐತೀರ್ಪು ಹೊರಬರಲಿದೆ. ದಿನಾಂಕ: 24-9-2001 ರಂದು ಭೂಸ್ವಾಧೀನಾಧಿಕಾರಿಗಳಿಗೆ ಕಚ್ಚಿ ಪಡೆದ ದಿನಾಂಕ ತಿಳಿಸಲಾಗಿದೆ.